**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.**

**ಸಿ ಸಿ ನಂ.1203/2021**

| | | |
|---|---|---|
| ಸಾಕ್ಷಿದಾರರ ಹೆಸರುಃ | ದಿವ್ಯಾ | ಸಿ ಡಬ್ಲ್ಯೂ 1 |
| ಗಂಡನ ಹೆಸರುಃ | ಲೇಟ್ ರಾಮಕೃಷ್ಣೇಗೌಡ | ಪಿ ಡಬ್ಲ್ಯೂ 1 |
| ವಯಸ್ಸುಃ | 60 ವರ್ಷ | |
| ಉದ್ಯೋಗಃ | ಗೃಹಿಣಿ | ಪ್ರ.ವ .ಬೋ.ದಿಃ |
| ವಾಸಸ್ಥಳಃ | ಯಾಚೇನಹಳ್ಳಿ ಗ್ರಾಮ | **02.05.2023** |

**ಮುಖ್ಯ ವಿಚಾರಣೆಃ** ಮಾನ್ಯ **ಎಪಿಪಿ** ರವರಿಂದಃ

ಈ ಪ್ರಕರಣದ ಆರೋಪಿತರು ನನಗೆ ಗೊತ್ತು. ಸದರಿಯವರು ನಮ್ಮ ಮನೆಯ ಪಕ್ಕದ ಮನೆಯ ನಿವಾಸಿಯಾಗಿರುತ್ತಾರೆ.

ಈ ಪ್ರಕರಣದ ಆರೋಪಿತರು ನಮ್ಮ ಮನೆಯ ಮುಂದೆ ಕಸ ಹಾಕುತ್ತಿದ್ದರು ಹಾಗೂ ಓಡಾಡಲು ತೊಂದರೆ ಕೊಡುತ್ತಿದ್ದರು. ಸದರಿ ವಿಷಯದ ಹಿನ್ನಲೆಯಿಂದ ದಿನಾಂಕ 29.04.2021 ರಂದು ಬೆಳಿಗ್ಗೆ 7.00 ರಿಂದ 7.30 ಗಂಟೆ ಸಮಯದಲ್ಲಿ ನಾನು ಯಾಚೇನಹಳ್ಳಿ ಗ್ರಾಮದಲ್ಲಿರುವ ನಮ್ಮ ಮನೆಯ ಮುಂದೆ ನೀರು ಹಿಡಿಯುತ್ತಿರುವಾಗ ಈ ಪ್ರಕರಣದ ಆರೋಪಿತರು ಬಂದಿದ್ದು, 1 ನೇ ಆರೋಪಿಯು ನನಗೆ ಬೇವರ್ಸಿ ಮುಂಡೆ, ಲೋಪರ ಮುಂಡೆ ಎಂದು ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ. ನನ್ನ ಮುಂದಲೆಯನ್ನು ಹಿಡಿದುಕೊಂಡು ಕೈಯಿಂದ ನನಗೆ ಹೊಡೆದಿರುತ್ತಾರೆ. ನಾನು ಕೆಳಗೆ ಬಿದ್ದಾಗ 1 ನೇ ಆರೋಪಿಯು ಕಾಲಿನಿಂದ ಒದ್ದಿರುತ್ತಾಳೆ. 2 ನೇ ಆರೋಪಿಯು ನನಗೆ ಲೋಪರ ಮುಂಡೆ, ನೀನು ಹೆಣ್ಣಾ ಎಂದು ಹೇಳುತ್ತಾ ನನಗೆ ಅವಾಚ್ಯ ಶಬ್ಧಗಳಿಂದ ಬೈಯುತ್ತಾ ನನ್ನ ಕಪಾಳಕ್ಕೆ ಹೊಡೆದಿರುತ್ತಾನೆ. ಆ ಸಮಯದಲ್ಲಿ ಚಾಸಾ-2 ಮತ್ತು ಚಾಸಾ-2 ರವರು ಬಂದು ಜಗಳ ಬಿಡಿಸಿರುತ್ತಾರೆ. ಆ ಸಮಯದಲ್ಲಿ ಕೋವಿಡ್ ಸಾಂಕ್ರಮಿಕ ರೋಗ ಇದ್ದು, ಬಸ್ ಸೌಲಭ್ಯ ಇಲ್ಲದೇ ಇರುವ ಕಾರಣ ನಾನು ಬೇರೆಯವರೊಂದಿಗೆ ಗಾಡಿಯಲ್ಲಿ ಬನ್ನೂರು ಪೊಲೀಸ

ಠಾಣೆಗೆ ಹೋಗಿ ಮಧ್ಯಾಹ್ನ ಸುಮಾರು 2 ಗಂಟೆ ಸಮಯದಲ್ಲಿ ದೂರು ನೀಡಿರುತ್ತೇನೆ. ನಂತರ ನಾನು ಬನ್ನೂರು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ಚಿಕಿತ್ಸೆ ಪಡೆದು ನಾನು ವಾಪಸ ಮನೆಗೆ ಬಂದಿರುತ್ತೇನೆ.

ಮರುದಿನ ಅಂದರೆ ದಿನಾಂಕ 30.04.2021 ರಂದು ಬೆಳಿಗ್ಗೆ ಸುಮಾರು 10 ರಿಂದ 10.30 ಗಂಟೆ ಸಮಯದಲ್ಲಿ ಪೊಲೀಸರು ನಮ್ಮ ಮನೆಯ ಹತ್ತಿರ ಬಂದಿದ್ದು, ನಾನು ಸ್ಥಳ ತೋರಿಸಿದಂತೆ ಚಾಸಾ-4 ಮತ್ತು 5 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಮರು ಹೇಳಿಕೆ ಪಡೆದುಕೊಂಡಿರುತ್ತಾರೆ.

ಸಾಕ್ಷಿಯು ತಾವು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-1** ಎಂದು, ಸಾಕ್ಷಿ ಸಹಿಯನ್ನು **ನಿಪಿ-1 ಎ** ಎಂದು ಗುರುತಿಸಲಾಯಿತು. ಕೃತ್ಯ ಸ್ಥಳ ಪಂಚನಾಮೆಯನ್ನು **ನಿಪಿ-2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-2 ಎ** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ **ಕೆ.ಎಂ.ಯು** ವಕೀಲರಿಂದಃ

ಶೋಭಾರವರು 1 ನೇ ಆರೋಪಿಯ ಓರಗಿತ್ತಿ ಆಗಿರುತ್ತಾರೆ ಎಂದರೆ ಸರಿ. ಶೋಭಾರವರ ಗಂಡ ನನಗೆ ತಮ್ಮ ಆಗಬೇಕು ಎಂದರೆ ಸರಿ. ಶೋಭಾರವರ ನನ್ನ ಅಕ್ಕನ ಮಗಳು ಆಗಿರುತ್ತಾಳೆ. ಆರೋಪಿತರು ನನ್ನೊಂದಿಗೆ ಬಹಳಷ್ಟು ಬಾರಿ ಜಗಳ ಮಾಡಿರುವ ಬಾಬ್ತು ನಾನು ಪೊಲೀಸರಿಗೆ ಹಲವು ಬಾರಿ ತಿಳಿಸಿರುತ್ತೇನೆ. ನಾನು ಬಹಳಷ್ಟು ಬಾರಿ ಆರೋಪಿತರ ವಿರುದ್ಧ ದೂರು ನೀಡಿರುತ್ತೇನೆ. ಸದರಿ ದೂರುಗಳು ನನ್ನ ಬಳಿ ಇರುತ್ತವೆ. ಸದರಿ ವಿಚಾರವನ್ನು ನಾನು ನಿಪಿ-1 ದೂರಿನಲ್ಲಿ ತಿಳಿಸಿರುವುದಿಲ್ಲ. ಸದರಿ ವಿಚಾರವನ್ನು ತಿಳಿಸಲು ನನಗೆ ತೊಂದರೆ ಇರಲಿಲ್ಲ. ನಾನು ಇರುವ ಮನೆ ನನ್ನ ಚಿಕ್ಕಪ್ಪನ ಹೆಸರಿನಲ್ಲಿ ಇರುತ್ತದೆ. ಸದರಿಯವರು ನನಗೆ ಬಿಟ್ಟು ಕೊಟ್ಟಿರುತ್ತಾರೆ. ಮನೆಯ ನಂಬರ ನನಗೆ ನೆನಪಿರುವುದಿಲ್ಲ. ನಾನು ಮೇಳಾಪುರ ಗ್ರಾಮದ ನಿವಾಸಿಯನ್ನು ಮದುವೆ ಆಗಿರುತ್ತೇನೆ. ಅಲ್ಲಿ ನಾನು ಸುಮಾರು 1 ರಿಂದ 2 ತಿಂಗಳು ವಾಸ ಮಾಡಿರುತ್ತೇನೆ. ನನಗೆ ಇಬ್ಬರು ಮಕ್ಕಳು ಇರುತ್ತಾರೆ. ಸದರಿಯವರು ಇಬ್ಬರು ಬೆಂಗಳೂರಿನಲ್ಲಿ ವಾಸ ಮಾಡುತ್ತಾರೆ. ನಾನು ಯಾಚೇನಹಳ್ಳಿ ಗ್ರಾಮದಲ್ಲಿರುವ ನನ್ನ ಚಿಕ್ಕಪ್ಪನ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ ಎಂದು

ತೋರಿಸಲು ಬಾಡಿಗೆ ಕರಾರು ಪತ್ರ ಅಥವಾ ದಸ್ತಾವೇಜುಗಳು ಇರುವುದಿಲ್ಲ, ಸಾಕ್ಷಿ ಮುಂದುವರಿದು ನನ್ನ ಚಿಕ್ಕಪ್ಪನವರು ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸದರಿ ಮನೆಯಲ್ಲಿ ಸುಮಾರು 1980 ರಿಂದ ವಾಸ ಮಾಡುತ್ತಿದ್ದೇನೆ. ನನ್ನ ಚಿಕ್ಕಪ್ಪ ತೀರಿಕೊಂಡು ಸುಮಾರು 20 ವರ್ಷಗಳಾಯಿತು. ನಾನು ನನ್ನ ಚಿಕ್ಕಪ್ಪನಿಂದ ಸದರಿ ಮನೆಯ ದಸ್ತಾವೇಜನ್ನು ನನ್ನ ಹೆಸರಿಗೆ ಮಾಡಿಸಿಕೊಳ್ಳಲು ನನಗೆ ಹಣದ ಕೊರತೆ ಇದ್ದ ಕಾರಣ ಮಾಡಿಸಿಕೊಂಡಿರುವುದಿಲ್ಲ. ನಾನು ಸದರಿ ಮನೆಯಲ್ಲಿ ವಾಸ ಮಾಡುತ್ತಿದ್ದೆನು ಹಾಗೂ ನನ್ನ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದೆನು. ಈಗ ಸುಮಾರು 12 ವರ್ಷಗಳಿಂದ ಯಾಚೇನಹಳ್ಳಿ ಗ್ರಾಮದಲ್ಲಿರುವ ಮನೆಯಲ್ಲಿಯೇ ವಾಸ ಮಾಡುತ್ತಿದ್ದೇನೆ.

ಆರೋಪಿತರು ಮತ್ತು ನನ್ನ ನಡುವೆ ಸದರಿ ಮನೆಯ ವಿಚಾರವಾಗಿ ಸುಮಾರು ವರ್ಷಗಳಿಂದ ಮನಸ್ತಾಪ ಇರುತ್ತದೆ ಎಂದರೆ ಸರಿ. ನಾನು ಮೇಳಾಪುರ ಗ್ರಾಮದಲ್ಲಿ ವಾಸ ಮಾಡುತ್ತಿದ್ದ ಸಮಯದಲ್ಲಿ ನಾನು ಹಲವಾರು ಬಾರಿ ಯಾಚೇನಹಳ್ಳಿ ಗ್ರಾಮದಲ್ಲಿರುವ ಮನೆಯ ಭಾಗ ಕೊಡುವಂತೆ ಆರೋಪಿತರಿಗೆ ಕೇಳುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿತರು ತಮ್ಮ ಮನೆಯ ಕಸಗೂಡಿಸಿ ನಮ್ಮ ಮನೆಯ ಮುಂದೆ ಕಸ ಹಾಕುತ್ತಿದ್ದರು, ತಮ್ಮ ಚಪ್ಪಲಿಗಳನ್ನು ಬಿಡುತ್ತಿದ್ದರು. ನನ್ನ ಮತ್ತು ಅವರ ಮನೆ ಅಕ್ಕಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ಆರೋಪಿತರು ಕಸವನ್ನು ನಾವು ತಿರುಗಾಡುವ ಬಾಗಿಲಿನ ಮುಂದೆ ಹಾಕುತ್ತಿದ್ದರು, ಸಾಕ್ಷಿ ಮುಂದುವರಿದು ಆರೋಪಿತರು ಸದರಿ ಮನೆ ತಮಗೆ ಸೇರಿರುತ್ತದೆ ಎಂದು ಕಸ ಹಾಕುತ್ತಿದ್ದರು ಎಂದು ನುಡಿಯುತ್ತಾರೆ.

ನಮ್ಮ ಮತ್ತು ಆರೋಪಿತರ ಮನೆ ಅಕ್ಕಪಕ್ಕ ಇರುವ ಕಾರಣ ಆರೋಪಿತರು ಕಸಗೂಡಿಸಿ ಗಲ್ಲಿಯಲ್ಲಿ ಹಾಕುತ್ತಿದ್ದರು ಎಂದರೆ ಸಾಕ್ಷಿ ನಮ್ಮ ಮನೆ ಹಾಕುತ್ತಿದ್ದರು ಎಂದು ನುಡಿಯುತ್ತಾರೆ. ನಾನೇ ಆರೋಪಿತರೊಂದಿಗೆ ಜಗಳ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ಆರೋಪಿರು ಗಲಾಟೆಯನ್ನು ಸುಮಾರು 20 ವರ್ಷಗಳಿಂದ ಪ್ರತಿಧಿನ ಮನೆಗೆ ಸಂಬಂಧಿಸಿದಂತೆ ಮಾಡುತ್ತಿರುತ್ತಾರೆ. ಆರೋಪಿತರು ಪ್ರತಿದಿನ ಬೇರೆ ಬೇರೆ ವಿಚಾರಕ್ಕೆ ಸಂಬಂದಿಸಿದಂತೆ ಗಲಾಟೆ ಮಾಡುತ್ತಿದ್ದರು ಎಂದು ಹೇಳಿರುತ್ತೇನೆ ಎಂದರೆ ಸರಿ. ಯಾವ ಯಾವ ದಿನದಂದು ಆರೋಪಿತರು ನನ್ನ ಮನೆಯ ಮುಂದೆ ಕಸ ಹಾಕುತ್ತಿದ್ದರು ಎಂದರೆ ಸಾಕ್ಷಿಯು ಪ್ರತಿದಿನ ಹಾಕುತ್ತಿದ್ದರು ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಕಸ

ಹಾಕಿರುತ್ತಾರೆ ಎಂದರೆ ಸಾಕ್ಷಿ ಸದರಿ ದಿನಾಂಕಗಳು ನನಗೆ ನೆನಪಿಟ್ಟುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಕೃತ್ಯ ನಡೆದಿದೆ ಎನ್ನಲಾದ ದಿನ ಆರೋಪಿತರು ಕಸವನ್ನು ಬೆಳಿಗ್ಗೆ 7 ರಿಂದ 7.30 ಗಂಟೆ ಸಮಯದಲ್ಲಿ ಕಸಗೂಡಿಸಿ ನಮ್ಮ ಮನೆಯ ಮುಂದೆ ಹಾಕಿರುತ್ತಾರೆ.

ಆರೋಪಿಯು ನನ್ನ ಮುಂದಲೆ ಹಿಡಿದು ಎಳೆದಾಗ ಕೂದಲು ಕಿತ್ತು ಬಂದಿರುತ್ತದೆ. ಸದರಿ ಕೂದಲನನ್ನು ನಾನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ಅದನ್ನು ನಾನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ಆರೋಪಿತರು ಮೈಕೈಗೆ ಹೊಡೆದ ಬಾಬ್ತು ಗಾಯಗಳಾಗಿರುವುದಿಲ್ಲ, ಆದರೆ ಮೈಕೈ ನೋವು ಇತ್ತು. ಸದರಿ ದಿನ ಆರೋಪಿತರು ಬೆಳಿಗ್ಗೆ ಸುಮಾರು 7 ರಿಂದ 7.30 ಗಂಟೆ ವರೆಗೆ ಗಲಾಟೆ ಮಾಡಿರುತ್ತಾರೆ. ನಮ್ಮ ಮನೆಯ ಸುತ್ತಮುತ್ತಲು ಮನೆಗಳು ಇರುತ್ತವೆ ಎಂರೆ ಸರಿ. ಎಷ್ಟು ಜನ ಕೃತ್ಯವನ್ನು ನೋಡಿರುತ್ತಾರೆ ಎಂದರೆ ಸಾಕ್ಷಿಯು ಬಹಳಷ್ಟು ಜನ ನೋಡಿರುತ್ತಾರೆ ಆದರೆ ಎಷ್ಟು ಜನ ನಿಖರವಾಗಿ ಹೇಳಲು ಆಗುವುದಿಲ್ಲ. ಸದರಿ ಜನರಲ್ಲಿ 5-6 ಹೆಸರುಗಳನ್ನು ಹೇಳಲು ಆಗುತ್ತದೆಯೇ ಎಂದರೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನ ಆರೋಪಿತರು ಕೃತ್ಯ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ಚಾಸಾ-2 ರವರು ಗಲಾಟೆ ನಡೆಯುತ್ತಿದ್ದ ಸಮಯದಲ್ಲಿ ಬಂದು ಜಗಳ ಬಿಡಿಸಿರುತ್ತಾರೆ. ಆಗ ಸಮಯದಲ್ಲಿ ಸುಮಾರು 7 ರಿಂದ 7.30 ಗಂಟೆ ಆಗಿತ್ತು. ಸದರಿಯವರು ಬನ್ನೂರು ಪಟ್ಟಣದಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. ನಾನು ಬನ್ನೂರು ಪೊಲೀಸ ಠಾಣೆಗೆ ಯಾರಿಗೆ ಸೇರಿದ ವಾಹನದಲ್ಲಿ ಹೋಗಿರುತ್ತೇನೆ ಎಂದು ಗೊತ್ತಿರುವುದಿಲ್ಲ, ಸದರಿಯವರಿಗೆ ನಾನು ಕರೆದುಕೊಂಡು ಹೋಗಲು ವಿನಂತಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿಯವರು ನಮ್ಮ ಗ್ರಾಮದವರಾಗಿರುವುದಿಲ್ಲ, ಸದರಿಯವರ ಗಾಡಿ ನಂಬರ ನನಗೆ ಗೊತ್ತಿರುವುದಿಲ್ಲ. ನಾನು ಗಾಡಿಯಲ್ಲಿ ಹೋದಾಗ ಸಮಯ ಮಧ್ಯಾಹ್ನ 1.45 ಆಗಿತ್ತು. ಗಲಾಟೆ ಮುಗಿದ ತಕ್ಷಣ ಪೊಲೀಸ ಠಾಣೆಗೆ ಹೋಗಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಎಲ್ಲರನ್ನೂ ಕರೆದುಕೊಂಡು ಹೋಗಲು ಕೇಳಿರುತ್ತಾರೆ, ಯಾರು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ-1 ದೂರನ್ನು ನಾನು ಹೇಳಿದಂತೆ ರಂಗಪ್ಪರವರು ಬರೆದಿರುತ್ತಾರೆ. ಸದರಿಯವರು ಬನ್ನೂರ ಪಟ್ಟಣದವರಾಗಿದ್ದು, ಅವರ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ.

ಸದರಿಯವರು ದೂರು ಬರೆದ್ದಾಗ ಸಮಯ 1.50 ಆಗಿತ್ತು. ನಿಪಿ-1 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುತ್ತವೆ. ನಿಪಿ-1 ಬರೆದ ನಂತರ ಸದರಿಯವರು ನನಗೆ ಓದಿ ತಿಳಿಸಿರುತ್ತಾರೆ. ನಾನು ಪೊಲೀಸ ಠಾಣೆಯಲ್ಲಿ ಸುಮಾರು 10 ನಿಮಿಷಗಳ ಕಾಲ ಇದ್ದು, ನಂತರ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಗೆ ನಾನು ಆಂಬುಲೆನ್ಸನಲ್ಲಿ ಹೋಗಿರುತ್ತೇನೆ. ನಾನು ಯಾಚೇನಹಳ್ಳಿ ಗ್ರಾಮದಿಂದ ಬನ್ನೂರು ಪೊಲೀಸ ಠಾಣೆಗೆ ದ್ವಿಚಕ್ರ ವಾಹನದಲ್ಲಿ ಬಂದಿರುತ್ತೇನೆ ಹಾಗೂ ಪೊಲೀಸ ಠಾಣೆಯಿಂದ ಸರ್ಕಾರಿ ಆಸ್ಪತ್ರೆಗೆ ಆಂಬುಲೆನ್ಸನಲ್ಲಿ ಹೋಗಿರುತ್ತೇನೆ ಎನ್ನುವ ವಿಚಾರವನ್ನು ನಾನು ದೂರಿನಲ್ಲಿ ಅಥವಾ ಮರುವಿಚಾರಣೆಯಲ್ಲಿ ತಿಳಿಸಿರುವುದಿಲ್ಲ. ಆಂಬುಲೆನ್ಸ ಗೆ ನಾನೇ ಕರೆ ಮಾಡಿರುತ್ತೇನೆ. ನಾನು ದೂರವಾಣಿ ಕರೆ ಮಾಡಿದ 10 ನಿಮಿಷಗಳಲ್ಲಿ ಆಂಬುಲೆನ್ಸ ಬಂದಿರುತ್ತದೆ. ನಾನು ಆಸ್ಪತ್ರೆಯಲ್ಲಿ ಅರ್ಧ ಗಂಟೆಗಳ ಕಾಲ ಚಿಕಿತ್ಸೆ ಪಡೆದಿರುತ್ತೇನೆ.

ಆರೋಪಿತರು ನನ್ನೊಂದಿಗೆ ಗಲಾಟೆ ಮಾಡಿರುವುದಿಲ್ಲ ಹಾಗೂ ಆಸ್ತಿಗೆ ವಿಚಾರಕ್ಕೆ ಸಂಬಂಧಿಸಿದಂತೆ ನಾನೇ ಅವರೊಂದಿಗೆ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಶೋಭಾರವರ ನನ್ನ ವಿರುದ್ಧ ದೂರು ದಾಖಲಿಸಿದ್ದು, ಸದರಿ ಪ್ರಕರಣ ಇದೇ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಆರೋಪಿತರು ಕಸಕಡ್ಡಿಯನ್ನು ನಮ್ಮ ಮನೆಯ ಮುಂದೆ ಹಾಕಿರುವುದಿಲ್ಲ, ನಾನು ಅವರಿಗೆ ಕೇಳಿರುವುದಿಲ್ಲ, ಅವರು ನನಗೆ ಬೈದಿರುವುದಿಲ್ಲ, ಹೊಡೆದಿರುವುದಿಲ್ಲ, ಮುಂದಲೆಯನ್ನು ಹಿಡಿದು ಎಳೆದಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-2 ಎ ಸಹಿ ನನಗೆ ಸೇರಿರುವುದಿಲ್ಲ. ಪೊಲೀಸರು ಪಂಚನಾಮೆಗೆ ದಿನಾಂಕ 30.04.2021 ರಂದು ಬಂದಿರುತ್ತಾರೆ. ಪಂಚನಾಮೆಗೆ ಇಬ್ಬರು ಪೊಲೀಸರು ಬಂದಿರುತ್ತಾರೆ. ಪಂಚರನ್ನು ನಾನೇ ಕರೆದುಕೊಂಡು ಬಂದಿರುತ್ತೇನೆ. ಪಂಚನಾಮೆಯನ್ನು ನಮ್ಮ ಮನೆಯ ಮುಂದೆ ಮಾಡಿದ ನಂತರ ಪಂಚರ ಮನೆಯಲ್ಲಿ ಪಂಚರ ಸಹಿಗಳನ್ನು ಪಡೆದುಕೊಂಡಿರುತ್ತೇನೆ. ಪಂಚನಾಮೆ ಮಾಡಿದ ಸ್ಥಳದ ಚೆಕ್ಕುಬಂಧಿ ನನಗೆ ತಿಳಿದಿರುತ್ತದೆ, ದಕ್ಷಿಣಕ್ಕೆ-ನಮ್ಮ ಮನೆ, ಉತ್ತರಕ್ಕೆ-ಓಣಿ, ಪೂರ್ವ-ಪಶ್ಚಿಮ ಅಕ್ಕಪಕ್ಕದ ಮನೆಗಳು ಇರುತ್ತವೆ. ನಿಪಿ-2 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿರುವುದಿಲ್ಲ. ಸದರಿ ದಿನ ಪೊಲೀಸರು ಪಂಚನಾಮೆಗೆ ನಮ್ಮ ಗ್ರಾಮಕ್ಕೆ ಬಂದಿರುವುದಿಲ್ಲ ಮತ್ತು ನಾನು ಸದರಿ ದಾಖಲೆಗೆ ಪೊಲೀಸ

ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಆಗಲಿ ಎಂದು ಯಾವುದೇ ಘಟನೆ ನಡೆಯದಿದ್ದರೂ ಹಾಗೂ ಸ್ಥಳದಲ್ಲಿ ಯಾವುದೇ ಪಂಚನಾಮೆ ನಡೆಯದಿದ್ದರೂ ಆರೋಪಿಗೆ ತೊಂದರೆ ಆಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ತಿ.ನರಸೀಪುರ.**